<u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**<u>ಸಿ.ಸಿ. ಸಂಖ್ಯೆಃ 510/2023</u>**

**ಸಾಕ್ಷಿಯನ್ನು ದಿಃ 04.01.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಶೇಖರ | ಸಿಡಬ್ಲ್ಯೂಃ1 | ಪಿಡಬ್ಲ್ಯೂಃ1 |
| ತಂದೆಯ ಹೆಸರು | ಸಿದ್ದೇಗೌಡ | | |
| ವಯಸ್ಸು | 58 ವರ್ಷ | | |
| ಉದ್ಯೋಗ | ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರು | | |
| ವಾಸಸ್ಥಳ | ಅರಸುಕಲ್ಲಹಳ್ಳಿ | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ನನಗೆ ಚಾಸಾ–2 ರಿಂದ 8 ರವರ ಪರಿಚಯ ಇರುತ್ತದೆ. ಮೃತ ನಾಗಯ್ಯ ಮತ್ತು ಜ್ಯೋತಿರವರು ನನಗೆ ಗೊತ್ತು, ಅವರು ನನ್ನ ಜೊತೆ ಕೆಲಸ ಮಾಡುವವರಾಗಿದ್ದರು. ನಾವೆಲ್ಲ ಅಂದರೆ ಗ್ರಂಥಾಲಯಗಳ ಮೇಲ್ವಿಚಾರಕರಾದ ಮೃತ ನಾಗಯ್ಯ, ಮೃತ ಜ್ಯೋತಿ, ನಾನು, ಚಾಸಾ–2 ರಿಂದ 8 ರವರು ಜೂನ್ 26 ಅಥವಾ 27, 2022 ರಂದು ಮೇಲ್ವಿಚಾರಕರ ಸಭೆಗಾಗಿ ಮಂಡ್ಯಕ್ಕೆ ಹೋಗಿ ಬರುವಾಗ ಬಿಳಿಕೆರೆಯಿಂದ ಮುಂದೆ ಮಲ್ಲಿನಾಥಪುರದ ಬಳಿ ನಾವು ಬರುತ್ತಿದ್ದ ಟಿ.ಟಿ. ವಾಹನ ಮತ್ತು ಕೆ.ಎಸ್.ಆರ್.ಟಿ.ಸಿ. ಬಸ್ ನಡುವೆ ಅಪಘಾತ ಆಯಿತು. ಸದರಿ ಅಪಘಾತದಿಂದ ನನಗೆ ನೆನಪಿನ ಶಕ್ತಿ ಕುಂಠಿತಗೊಂಡಿದೆ. ಅಪಘಾತದಲ್ಲಿ ನನಗೆ ಮಂಡಿ ಬಳಿ, ತಲೆಗೆ ಅಂದರೆ ಹಣೆಯ ಮೇಲ್ಭಾಗ ಪೆಟ್ಟು ಬಿದ್ದಿತ್ತು. ಚಾಸಾ–2 ರಿಂದ 8 ರವರಿಗೆ ಕೂಡ ಪೆಟ್ಟುಗಳಾದವು. ನಮ್ಮನ್ನೆಲ್ಲ ಹುಣಸೂರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆತಂದರು.

ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ನಾನು ಆಸ್ಪತ್ರೆಯಲ್ಲಿ ಇರುವಾಗ ಬಿಳಿಕೆರೆ ಪೊಲೀಸರಿಗೆ ಕೊಟ್ಟ ದೂರು ಆಗಿದ್ದು, ಅದನ್ನು ನಿಪಿ–1 ಎಂದು, ಸಾಕ್ಷಿ ರುಜುವನ್ನು ನಿಪಿ–1(ಎ) ಎಂದು ಗುರುತಿಸಿದೆ. ನಾವು ಆ ದಿನ ಮಂಡ್ಯದಿಂದ ಬರುವಾಗ ವಾಹನದಲ್ಲಿ

ಮಲಗಿಕೊಂಡಿದ್ದೆವು. ಆ ಸಂದರ್ಭದಲ್ಲಿ ಅಪಘಾತ ಆಗಿತ್ತು. ಅಪಘಾತವಾದ ನಂತರ ನಮ್ಮನ್ನೆಲ್ಲ ವಾಹನದಿಂದ ಕಳಗೆ ಇಳಿಸಿಕೊಂಡರು. ನಾಗಯ್ಯ ಎನ್ನುವವರು ಸ್ಥಳದಲ್ಲೆ ತೀರಿಹೋಗಿದ್ದರು. ಇಷ್ಟು ಮಾತ್ರ ನನಗೆ ನೆನಪಿದೆ. ಆ ದಿನ ನಮ್ಮ ಟಿ.ಟಿ. ವಾಹನವನ್ನು ಓಡಿಸುತ್ತಿದ್ದ ಚಾಲಕನನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಅವರು ಈ ದಿನ ನ್ಯಾಯಾಲಯದಲ್ಲಿ ಇರುವುದಿಲ್ಲ. ಅವರು ಅಪಘಾತವಾದ ನಂತರ ವಾಹನದಿಂದ ನೆಗೆದು ಓಡಿ ಹೋಗಿದ್ದರು. ಆದ್ದರಿಂದ ನನಗೆ ಗುರುತಿಸಲು ಆಗುತ್ತಿಲ್ಲ. (**ಆರೋಪಿ ಕಟಕಟೆಯಲ್ಲಿ ಹಾಜರಿದ್ದು ಸಾಕ್ಷಿ ಅವರನ್ನು ನೋಡಿ ಗುರುತಿಸಲು ಅಸಮರ್ಥರಾಗಿರುತ್ತಾರೆ**).

ನಮ್ಮ ಟಿಟಿ ವಾಹನ ಮಂಡ್ಯ ಕಡೆಯಿಂದ ಬರುತ್ತಿತ್ತು. ಕೆ.ಎಸ್.ಆರ್.ಟಿ.ಸಿ. ಬಸ್ ಮೈಸೂರಿನ ಕಡೆಗೆ ಹೋಗುತ್ತಿತ್ತು, ಆಗ ಈ ಅಪಘಾತ ಆಗಿದ್ದು ನನ್ನ ಪ್ರಕಾರ ಟಿಟಿ ವಾಹನದ ಚಾಲಕನ ತಪ್ಪಿನಿಂದ ಈ ಅಪಘಾತ ಆಗಿರುತ್ತದೆ. ಟಿಟಿ ವಾಹನದ ಚಾಲಕ ಸರಿಯಾಗಿ ವಾಹನವನ್ನು ಚಾಲನೆ ಮಾಡುತ್ತಿರಲಿಲ್ಲ ಅತೀ ವೇಗವಾಗಿ ಚಾಲನೆ ಮಾಡುತ್ತಿದ್ದರು ಮತ್ತೇನು ಮಾಡಿಕೊಂಡರೋ ನನಗೆ ಗೊತ್ತಿಲ್ಲ, ನಾವು ಬಿಳಿಕೆರೆ ಬಳಿ ಇಳಿದು ಟೀ ಕುಡಿದು ಬರುತ್ತಿದ್ದೆವು. ಟಿಟಿ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಹುಣಸೂರು ಸರ್ಕಾರಿ ಆಸ್ಪತ್ರೆಯಲ್ಲಿ ನನಗೆ ಆದ ಗಾಯಗಳಿಗೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀಸವಾಲು ಸಸಅ ರವರಿಂದಃ-**

ದಿನಾಂಕ 27.06.2022 ರಂದು ನಾನು ಮತ್ತು ನಮ್ಮ ಮೇಲ್ವಿಚಾರಕರುಗಳು ಎಲ್ಲಾ ಹುಣಸೂರಿನಿಂದ ಕೆಎ-12-ಎ-6816 ರ ಟೆಂಪೋ ಟ್ರಾವಾಲರ್ ವಾಹನದಲ್ಲಿ ಮಂಡ್ಯಕ್ಕೆ ಹೋಗಿ ಸಭೆಯನ್ನು ಮುಗಿಸಿಕೊಂಡು ರಾತ್ರಿ 8 ಗಂಟೆ ಸಮಯದಲ್ಲಿ ವಾಪಸ್ ಹುಣಸೂರಿಗೆ ಬರುತ್ತಿದ್ದೆವು ಎಂದರೆ ಸರಿ. ಆಗ ಹುಣಸೂರು ತಾಲ್ಲೂಕು ಮಲ್ಲಿನಾಥಪುರದ ಸರ್ಕಲ್ ಬಳಿ ಟಿಟಿ ಚಾಲಕ ವಾಹನವನ್ನು ತನ್ನ

ಬಲಭಾಗಕ್ಕೆ ತರುಗಿಸಿದಾಗ ವಾಹನದ ನಿಯಂತ್ರಣ ತಪ್ಪಿ ಎದುರುಗಡೆ ಬರುತ್ತಿದ್ದ ಕೆಎ-09-ಎಫ್-5132 ನಂಬರಿನ ಕೆ.ಎಸ್.ಆರ್.ಟಿ.ಸಿ. ಬಸ್‌ನ ಮುಂಭಾಗಕ್ಕೆ ಡಿಕ್ಕಿ ಮಾಡಿದ್ದರಿಂದ, ನಮ್ಮ ಟಿಟಿ ವಾಹನದ ಮುಂಭಾಗದಲ್ಲಿ ಕುಳಿತಿದ್ದ ನಾಗಯ್ಯರವರ ತಲೆಗೆ, ಮೈಕೈಗೆ ತೀವ್ರತರನಾದ ಪೆಟ್ಟಾಗಿ ಸ್ಥಳದಲ್ಲೆ ಮೃತಪಟ್ಟರು ಎಂದರೆ ಸರಿ. ಹಿಂಭಾಗದ ಸೀಟ್ನಲ್ಲಿ ಕುಳಿತ ನನಗೆ ತಲೆಗೆ, ಬಲಭಾಗದ ಎಡಕಾಲಿಗೆ ಮತ್ತು ಮಂಡಿಗೆ, ಎಡಭಾಗದ ಹಣೆಗೆ ಮೈಕೈಗೆ ಏಟಾಗಿತ್ತು ಎಂದರೆ ಸರಿ. ಅದೇ ವಾಹನದಲ್ಲಿದ್ದ ಜ್ಯೋತಿ ಮತ್ತು ಚಾಸಾ-2 ರಿಂದ 8 ರವರ ಮೈಕೈಗಳಿಗೆ ತೀವ್ರ ಸ್ವರೂಪದ ಪೆಟ್ಟಾಗಿತ್ತು ಎಂದರೆ ಸರಿ. ಅವರನ್ನೆಲ್ಲ ಮೈಸೂರಿನ ಆಸ್ಪತ್ರೆಗೆ ಹಾಗೂ ಚಾಸಾ-2 ಮತ್ತು 3 ರವರನ್ನು ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು ಎಂದರೆ ಸರಿ. ಈ ಅಪಘಾತಕ್ಕೆ ಟಿಟಿ ವಾಹನದ ಚಾಲಕನ ಅತೀ ವೇಗ ಮತ್ತು ಅಜಾಗರೂಕತೆಯೇ ಕಾರಣ ಆಗಿರುತ್ತದೆ ಎಂದರೆ ಸರಿ. ಈ ಎಲ್ಲಾ ವಿಚಾರಗಳ ಬಗ್ಗೆ ನಾನು ಪೊಲೀಸರ ಮುಂದು ನಿಪಿ-1 ರಂತೆ ದೂರು ನೀಡಿದ್ದೇನೆ ಎಂದರೆ ಸರಿ.

**<u>ಪಾಟೀಸವಾಲು ಃ ಆರೋಪಿ ಪರ ಶ್ರೀ ಕೆ.ಆರ್. ವಕೀಲರಿಂದ ಃ</u>**

ನಾನು ಈಗಲೂ ಕೆಲಸಕ್ಕೆ ಹೋಗುತ್ತಿದ್ದೇನೆ. ಈ ಅಪಘಾತ ಟಿಟಿ ವಾಹನದ ಚಾಲಕನ ತಪ್ಪಿನಿಂದ ಆಗಿದೆಯೋ ಅಥವಾ ಕೆ.ಎಸ್.ಆರ್.ಟಿ.ಸಿ. ಬಸ್ ನ ಚಾಲಕನ ತಪ್ಪಿನಿಂದ ಆಗಿತ್ತೋ ಎಂಬುದು ನನ್ನನ್ನು ಟಿಟಿ ವಾಹನದಿಂದ ಇಳಿಸಿ ಕೆಳಗೆ ಕರೆದುಕೊಂಡು ಬಂದ ನಂತರ ತಿಳಿಯಿತು ಎಂದರೆ ಸರಿ. ನಿಪಿ-1 ರ ದೂರು ನೀಡಿರುವುದನ್ನು ಹೊರತು ಪಡಿಸಿ ನಾನು ಅಪಘಾತದ ಬಗ್ಗೆ ಹೇಳಿಕೆ ನೀಡುತ್ತಿರುವುದು ಇದೇ ಮೊದಲ ಬಾರಿಯಾಗಿದೆ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.